


# ‘ಈ ಯುಧಿಷ್ಠಿರನನ್ನು ಕೊಂದು ಸತ್ಯದ ಸಾಲ ತೀರಸತೀನಿ’ ಎಂದ ಅರ್ಜುನ

(ಯುಧಿಷ್ಠಿರ ಕರ್ಣನಿಂದ ಏಟು ತಿಂದು ಶಿಬಿರಕ್ಕೆ ಮರಳಿ ಮಲಗಿದ್ದ. ಅರ್ಜುನ ಅವನನ್ನು ನೋಡಲು ಬಂದ. ಕರ್ಣನನ್ನು ಗೆಲ್ಲುತ್ತೇನೆ ಎಂದಿದ್ದ ಅರ್ಜುನ ಅವನನ್ನು ಕೊಲ್ಲದೆ ಬಂದದ್ದು ನೋಡಿ, ಯುಧಿಷ್ಠಿರ ‘ಕರ್ಣನನ್ನು ಗೆಲ್ಲಲಾರದೆ ಹೆದರಿಕೊಂಡು ಬಂದಿದ್ದೀಯೆ ನಿನ್ನ ಗಾಂಡೀವವನ್ನು ಕೃಷ್ಣನಿಗೆ ಕೊಟ್ಟುಬಿಡು’ ಎಂದೆಲ್ಲಾ ಹಿಯಾಳಿಸಿದ. ಇದು ಹಿಂದಿನ ಸಂಧಿಯ ಮಾತು.)

ಯುಧಿಷ್ಠಿರ ಹೀಗಂದದ್ದಕ್ಕೇ ಅರ್ಜುನನಿಗೆ ಕೋಪ ಏರಿ ಕೊಂದು ಬಿಡೋದಕ್ಕೆ ಅಂತ ಖಡ್ಗಕ್ಕೆ ಕೈ ಹಾಕಿದ. ಅರ್ಜುನನ ಕೋಪಾನ ನೋಡೇ ಅವನ ಮನಸ್ಸು ತಿಳಿದ ಕೇಶವ.

**ಕೃಷ್ಣ:** ಯಾಕಪ್ಪಾ ಪಾರ್ಥ ಕತ್ತೀ ಹಿಡೀತಿದಿ. ಕೊಲ್ಲಬೇಕಾದವರು ಇಲ್ಲಿ ಯಾರೂ ಕಾಣತಾ ಇಲ್ಲವಲ್ಲ. ಧೃತರಾಷ್ಟ್ರನ ಮಕ್ಕಳನ್ನೆಲ್ಲ ಭೀಮ ಅಲ್ಲೇ ಕಟ್ಟಿಹಾಕಿದಾನೆ. ನೀನು ಇಲ್ಲಿಗೆ ಬಂದದ್ದು ರಾಜನ್ನ ನೋಡೋಕೆ ಅಂತ. ರಾಜ ಹುಷಾರಾಗಿದ್ದಾನಲ್ಲ ಅಂತ ಖುಷಿ ಪಡಬೇಕು. ಏನು ಮಂಕು ಬಡೀತು ನಿನಗೆ?

ಯಾಕೆ ಕತ್ತಿ ಎತ್ತತಾ ಇದ್ದೀ, ಹುಚ್ಚು ಹಿಡೀತಾ ಹೇಗೆ?

ಕೃಷ್ಣ ಹಾಗಂದದ್ದಕ್ಕೆ ಕೆರಳಿದ ಹಾವಿನ ಥರ ಉಸಿರು ಬಿಡತಾ, ಯುಧಿಷ್ಠಿರನನ್ನು ನೋಡತಾ, ಕೃಷ್ಣನಿಗೆ ಹೀಗಂದ ಅರ್ಜುನ–

**ಅರ್ಜುನ:** ‘ಗಾಂಡೀವಾನ ಇನ್ನೊಬ್ಬರ ಕೈಗೆ ಕೊಡಬೇಕಂತೆ!

ಹಾಗಂದವನ ತಲೆ ಹೋಳು ಮಾಡತೀನಿ ಅಂತ ನನ್ನ ವ್ರತ

ಈಗ ರಾಜ ನಿನ್ನೆದುರಿಗೇ ಅಂದನಲ್ಲ, ಈ ಮಾತು ಮಾತ್ರ ತಡಕಳಲ್ಲ ನಾನು

ಈ ಧರ್ಮಪುಕ್ಕಲ ರಾಜನನ್ನ ಈಗಲೇ ಕೊಂದು ಹಾಕತೀನಿ

ಈ ಯುಧಿಷ್ಠಿರನನ್ನು ಕೊಂದು ಸತ್ಯದ ಸಾಲ ತೀರಸತೀನಿ

ನನ್ನ ಕುದಿ ಇಳಿಸಿಕೋತೀನಿ ಅದಕ್ಕೇನೆ, ಖಡ್ಗಾನ ಹಿಡಿದೆ.

ಕೃಷ್ಣ: ‘ಛೀ, ನಿನ್ನ ಬುದ್ಧೀಗೆ, ಹಿರೀಕರ ಜತೆ ಇದ್ದು ಗೊತ್ತಿಲ್ಲ ಅಂತಾಯಿತು ಬಿಡು.

ಯುದ್ಧಕ್ಕೆ ಬಂದಿದ್ದರೂ ಕೈಯಲ್ಲಿ ಶಸ್ತ್ರ ಇಲ್ಲದವನನ್ನ, ತಪ್ಪಿಸಿಕೊಂಡು ಓಡತಿರೋರನ್ನ, ಶರಣಾದವರನ್ನ, ಕೈಮುಗೀತಿರೋರನ್ನ, ಕುಡಿದಿರೋರನ್ನ ಯುದ್ಧದಲ್ಲಿ ಕೊಲ್ಲೋದಿಲ್ಲ. ಇವನು ನಿನ್ನ ಸ್ವಂತ ಅಣ್ಣ, ರಾಜ, ಧರ್ಮವಂತ, ಗುರು ನಿನಗೆ. ಅವನನ್ನ ಕೊಲ್ಲೋಕೆ ಹೋಗುತ್ತಿದ್ದೀಯಲ್ಲಾ!

ಜೀವ ತೆಗೆದು ಧರ್ಮ ಉಳಿಸತೀನಿ ಅಂತೀಯಲ್ಲಾ ಪ್ರಾಣಿವಧೆ ಮಾಡೋದೂ ಧರ್ಮವೇ ಅಲ್ಲ ಅಂತೀನಿ ನಾನು. ಬೇಕಾದರೆ ಸುಳ್ಳು ಹೇಳು. ಆದರೆ ಹಿಂಸೇನ ಏನೇ ಆದರೂ ಮಾಡಕೂಡದು. ಈ ವ್ರತ ಹಿಡಿದದ್ದು ನಿನ್ನ ಎಳೇ ವಯಸ್ಸಲ್ಲಿ. ಆ ತಿಳಿಗೇಡಿ ನಿರ್ಧಾರವನ್ನೇ ಹಿಡಕೊಂಡು ಅಧರ್ಮಾನ ಮಾಡತೀನಿ ಅಂತೀ ನೋಡು, ಧರ್ಮದ ನಡೆ ತುಂಬಾ ನಾಜೂಕು, ಜಟಿಲ ಅದು ಧರ್ಮಸೂಕ್ಷ್ಮಾನ ನಿನಗೆ ಭೀಷ್ಮ ಹೇಳಿಕೊಡಬೇಕಿತ್ತು. ಇಲ್ಲ ವಿದುರ ಕಲಿಸಿಕೊಡಬೇಕಿತ್ತು, ಧರ್ಮರಾಯ ಕಲಿಸಬಹುದಿತ್ತು. ಇಲ್ಲಾ ಕುಂತೀನಾದರೂ ಕಲಿಸಿಕೊಡಬೇಕಿತ್ತು. ಈಗ ನಾನು ಹೇಳಿ ಕೊಡಬೇಕಾಗಿ ಬಂತು.

ಕೇಳಿಸಿಕೋ.

ಸತ್ಯವೇ ಒಳ್ಳೇದು. ಸತ್ಯವೇ ದೊಡ್ಡದು. ಸತ್ಯಾನ ಉಳಿಸಿಕೊಳ್ಳಬೇಕು. ನಿಜ

ನಿಂದೆಲ್ಲಾ ದರೋಡೆಯಾಗತಿರುವಾಗ ಸುಳ್ಳು ಹೇಳಬೇಕಾಗೇ ಬರುತ್ತೆ

ಅಲ್ಲಿ ಸುಳ್ಳೇ ಸತ್ಯದ ಕೆಲಸ ಮಾಡುತ್ತದೆ

ಸತ್ಯ ಎಲ್ಲಿ ಹೇಳಬೇಕು ಎಲ್ಲಿ ಅನುಷ್ಠಾನ ಮಾಡಬೇಕು

ಸತ್ಯ ಎಲ್ಲಿರತ್ತೆ ಅಂತ ತಿಳಿಯದವ ಎಳಸು ಅಷ್ಟೇ

ಸತ್ಯ ಯಾವಾಗ ಹೇಳಬೇಕು ಯಾವಾಗ ಹೇಳಬಾರದು ಅಂತ

ನಿಜ ಸುಳ್ಳನ್ನ ನಿರ್ಣಯ ಮಾಡಿದವನೆ

ಸರಿಯಾಗಿ ಧರ್ಮ ತಿಳಿದವನು ತಿಳೀತಾ

ಧರ್ಮ ಮಾಡಬೇಕು ಅಂತಲೇ ಆಸೆ, ಆದರೆ ತಿಳಿವಳಿಕೆ ಇಲ್ಲ. ಮತ್ತೆ ಮತ್ತೆ ಮೂಢತನ ಮಾಡಿಕೊಂಡು ದೊಡ್ಡ ಪಾಪಕ್ಕೇ ಪಕ್ಕಾಗತಾರೆ. ಇದರಲ್ಲಿ ಆಶ್ಚರ್ಯ ಏನೂ ಇಲ್ಲ. ಹೊಳೆ ದಂಡೆ ಕೌಶಿಕನ ಥರದೋರು.

ಕೌಶಿಕ ಅಂತ ಒಬ್ಬ ಬ್ರಾಹ್ಮಣ. ತುಂಬಾ ಓದಿಕೊಂಡೋನು ಹೊಳೆಸಂಗಮದ ಹತ್ತಿರದ ಒಂದು ಹಳ್ಳೀಲಿ ಇರತಿದ್ದ.

‘ನಾನು ಸತ್ಯವನ್ನೇ ಸದಾ ಆಡಬೇಕು, ಇದು ನನ್ನ ವ್ರತ’ ಅಂತ ಮಾಡಿಕೊಂಡು ಸತ್ಯವಾದಿ ಅಂತ